# ಎ.ಪಿ. ಮಾಲತಿ ಅವರ ಕಾದಂಬರಿಗಳಲ್ಲಿ ಅವ್ಯಕ್ತ ಪಾತ್ರಗಳು

**ಪುಟ್ಟಸ್ವಾಮಿ ಎನ್.ಎನ್.**

ಕನ್ನಡ ಸಹಶಿಕ್ಷಕರು, ಮೊರಾರ್ಜಿ ದೇಸಾಯಿ ವಸತಿ ಶಾಲೆ (ST–144),
ರಾಜೇನಹಳ್ಳಿ, ಮಾಲೂರು, ಕೋಲಾರ.

**DOI: https://doi.org/10.5281/zenodo.17487025**

## ABSTRACT:

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿರುವುದು ವಿಶಿಷ್ಟ ಮನೋಭಾವದ, ವಿಭಿನ್ನ ಶೈಲಿಯ ಬರಹಗಾರರ ಬರವಣಿಗೆಯಿಂದ ಎಂದರೆ ತಪ್ಪಾಗಲಾರದು. ಇಂಥಾ ಕನ್ನಡ ಸಾಹಿತ್ಯದ ಕಾದಂಬರಿ ಪ್ರಕಾರದ ಪ್ರವರ್ತಕರಂತೆ ಕಾಣಸಿಗುವ ನೂರಾರು ಕವಯಿತ್ರಿಯರಲ್ಲಿ ಎ.ಪಿ. ಮಾಲತಿಯವರ ಬರವಣಿಗೆಯೂ ಸಹ ಪರಿಗಣನೀಯ. ಬಹುಜ್ಞಾನ ಶಾಖೆಗಳಿಂದ ಕೂಡಿದ ಇವರ ಬರಹ ಕಥೆ, ಕಾದಂಬರಿ, ವ್ಯಕ್ತಿ ಚರಿತ್ರೆ, ಆತ್ಮಕಥೆ ಮುಂತಾದ ಪ್ರಕಾರಗಳ ಮುಖಮ್ಖೊತ್ತಿದೆ. ವಿದ್ಯಾರ್ಥಿ ದೆಸೆಯಿಂದಲೇ ಬರೆಯಲಾರಂಭಿಸಿದ ಎ. ಪಿ. ಮಾಲತಿಯವರು 1950ರ ದಶಕದಿಂದ ಹೆಚ್ಚಾಗಿ ಗುರುತಿಸಿಕೊಂಡಿದ್ದು, ಇತ್ತೀಚಿನವರೆಗೂ ಹಾಗೂ ಈಗಲೂ ಸಹ ಸಾಮಾಜಿಕರ ಬದುಕು ಬವಣೆಗಳನ್ನು ತಮ್ಮ ಲೇಖನಿ ಮುಖೇನ ಹಿಡಿದಿಡುತ್ತಿದ್ದಾರೆ. ಬಾಲ್ಯದ ಬಡತನ, ಶೈಕ್ಷಣಿಕ ಬದುಕು, ವೈವಾಹಿಕ ಬದುಕು, ವಿಭಕ್ತ– ಅವಿಭಕ್ತ ಕುಟುಂಬಗಳ ಅಸ್ತಿತ್ವ–ಅಳಿವು, ವರ್ಗ ಸಂಘರ್ಷದ ಛಾಯೆ, ಜೀವಿತದ ಸವಾಲುಗಳು, ಸಾಧನೆಗಳು, ಹೀಗೇ ದೈನಂದಿನ ಜೀವನದ ಏರುಪೇರು, ಓರೆಕೋರೆಗಳೇ ಇವರ ಲೇಖನಿಯ ಜೀವದ್ರವ್ಯ. ಸ್ತ್ರೀ ಪಾತ್ರಗಳ ಮೂಲಕ ತಮ್ಮೆಲ್ಲಾ ಸಾಮಾಜಿಕ ಸಂವೇದನೆಗಳನ್ನು ಬಿಂಬಿಸುವ ಇವರು ಮಹಾನ್ ವ್ಯಕ್ತಿಗಳಾಗಲು ಅಡ್ಡದಾರಿ, ಕಾಲುದಾರಿಗಳಿಲ್ಲ ಸತತ ಪರಿಶ್ರಮ ಹಾಗೂ ಪ್ರಾಮಾಣಿಕತೆ, ಸಾಮಾಜಿಕ ಸಮಾನ ಮನೋಭಾವ ಬಹಳ ಮುಖ್ಯ ಎಂಬುದನ್ನು ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಕನ್ನಡ ಸಾಹಿತ್ಯದ ಜ್ಯೋತಿ ಬೆಳಗಿಸುವ ಹಂಬಲವುಳ್ಳ ಇವರು ತಮ್ಮ ಕ್ರಿಯಾಶೀಲ ಬರಹ, ವಿಶಿಷ್ಟ ಪಾತ್ರ ರಚನೆಯ ಮೂಲಕ ಇಂದಿಗೂ ಸಹ ನಾಡಿನಾದ್ಯಂತ ಓದುಗ ವಲಯವನ್ನು ಸೆಳೆಯುತ್ತಿದ್ದಾರೆ.

## KEYWORDS:

ಅವ್ಯಕ್ತ ಪಾತ್ರಗಳು, ಅನಿಶ್ಚಯ, ಸದಾಶಿವ, ಸಂಘರ್ಷ, ಅಂಗಾರ, ಕರಿಯ, ಆಧುನೀಕತೆ.

ಮಾನವ ಸಂಘಜೀವಿ ಆತ ಎಂದಿಗೂ ಏಕಾಂಗಿಯಲ್ಲ, ಎಂಬುದು ಸಾರ್ವತ್ರಿಕ ಸತ್ಯ. ಏಕಾಂಗಿಯಾಗಿ ಬದುಕಲು ಸಾಧ್ಯವೂ ಇಲ್ಲ. ಆತನ ಸುತ್ತಲೂ ಮರಗಿಡಗಳಿಂದ ಕೂಡಿದ ಪ್ರಾಕೃತಿಕ ವಿಸ್ಮಯ ಜಗತ್ತಿದೆ, ಗಾಳಿ ಬೆಳಕು ನೀರು ಎಲ್ಲವೂ ಇವೆ ಅವುಗಳೊಂದಿಗೆ ಪ್ರತಿನಿತ್ಯ ವ್ಯವಹರಿಸುತ್ತಲೇ ಆತ ಬದುಕಬೇಕು. ಅಂತೆಯೇ ಸಾಹಿತ್ಯವೂ ಕೂಡ ಮಾನವ ಜೀವನವನ್ನೇ ಆವರಿಸಿರುವ ಅವಿಭಾಜ್ಯ ಅಂಗವಾಗಿದೆ ಎಂದರೂ ತಪ್ಪಾಗಲಾರದು. ಅದೊಂದು ಎಲ್ಲಾ ವರ್ಗಗಳಲ್ಲೂ, ಎಲ್ಲಾ ಸಂದರ್ಭಗಳಲ್ಲೂ ಚಾಲ್ತಿಯಲ್ಲಿರುವ ಅಭಿವ್ಯಕ್ತಿ ಸಾಧನ. ಸಾಹಿತ್ಯಕ್ಕೆ ಕೆಲ ಸಾವಿರ ವರ್ಷಗಳ ಇತಿಹಾಸವಿದೆ. ಆದರೆ ಸಾಹಿತ್ಯಿಕ ವಸ್ತುವು ಮಾನವನ ಇತಿಹಾಸದೊಂದಿಗೇ ತಳುಕುಹಾಕಿಕೊಂಡಿದೆ. ಆದರೆ ಈ ಮಾನವನ ಜೀವನದೊಂದಿಗೇ ಆರಂಭಗೊಂಡ ಸಾಹಿತ್ಯಿಕ ವಸ್ತು ಸಾಹಿತ್ಯದ ಮುಖೇನ ಅಭಿವ್ಯಕ್ತಗೊಂಡದ್ದು ಇತ್ತೀಚೆಗಷ್ಟೇ. "ಕಾದಂಬರಿಕಾರನು ಸೃಷ್ಟಿಸುವ ಜಗತ್ತು ಅವನ ಸುತ್ತಮುತ್ತ ಕಾಣುವ ಜಗತ್ತನ್ನು ಸಹಜವಾಗಿ ಅವಲಂಬಿಸಿರುತ್ತದೆ, ಎಂತಹ ಉನ್ನತ ಪ್ರತಿಭೆಯೇ ಆಗಲಿ ವಾಸ್ತವಿಕ ಜಗತ್ತಿನ ಆಧಾರ ಅದಕ್ಕೆ ಬೇಕೇಬೇಕು" (ಎಲ್.ಎಸ್. ಶೇಷಗಿರಿರಾವ್, ಕಾದಂಬರಿ ಸಾಮಾನ್ಯ ಮನುಷ್ಯ; ಪುಟ – 62) ಅಂತೆಯೇ ತಮ್ಮದೇ ಕುಟುಂಬದ ತಾಯ್ತಂದೆ, ಗಂಡ ಮನೆ ಮಕ್ಕಳು ಎಲ್ಲರನ್ನೂ ಸಂಭಾಳಿಸಿಕೊಂಡು ತನಗೆ ಪ್ರಿಯವಾದ ಸಾಹಿತ್ಯ ರಚಿಸುತ್ತಾ ಆ ಮುಖೇನ ಸಮಾಜವನ್ನು ತಿದ್ದುವ ಎ.ಪಿ. ಮಾಲತಿಯವರು ಮಾನವತಾವಾದಿ ಬರಹಗಾರ್ತಿ ಎಂದರೂ ಅತಿಶಯೋಕ್ತಿಯಾಗಲಾರದು. ತಮ್ಮ ಬದುಕಿನುದ್ದಕ್ಕೂ ಸಿಕ್ಕ ಸುಖ–ದುಃಖಗಳನ್ನೆಲ್ಲಾ ಸ್ಥಿತಪ್ರಜ್ಞೆಯಿಂದ ಸವಾಲಾಗಿ ಸ್ವೀಕರಿಸಿ, ಆ ಅನುಭವಗಳನ್ನೇ ಆಯ್ದು, ಜ್ಞಾನದ ಮೂಸೆಯಿಂದ ಎರಕ ಹೊಯ್ದು ಸು. ಮೂವತ್ತಕ್ಕೂ ಹೆಚ್ಚು ಸಾಮಾಜಿಕ ಕಾದಂಬರಿಗಳನ್ನು ರಚಿಸಿರುವುದಲ್ಲದೇ, ಜೀವನ ಪ್ರೀತಿಯನ್ನು ಕಳೆದುಕೊಳ್ಳದೇ ಇಂದಿಗೂ ರಚಿಸುತ್ತಿದ್ದಾರೆ ಕೂಡ. ಘಟನೆಯೊಂದನ್ನು ಕಥಾವಸ್ತುವನ್ನಾಗಿ ಮಾರ್ಪಡಿಸುವ ಚಾಕಚಕ್ಯತೆ ಇವರ ಲೇಖನಿಗಿದೆ. ಪ್ರತಿಯೊಬ್ಬ ಬರಹಗಾರರೂ ಕೂಡ ಕಥೆ, ಕಥಾವಸ್ತು, ಭಾಷೆ–ನಿರೂಪಣಾ ಶೈಲಿಯನ್ನು ಈಗಾಗಲೇ ನಿರ್ಧರಿಸಿಕೊಂಡಿರುತ್ತಾರೆ. ಆ ಉದ್ದೇಶಿತ ಗುರಿಯನ್ನು ತಲುಪಲು ಸಾಕಷ್ಟು ಪಾತ್ರಗಳು ಆ ಹಾದಿಯಲ್ಲಿ ದುಡಿಯುತ್ತವೆ. ನಾಯಕ–ನಾಯಕಿ ಪ್ರಧಾನ ಪಾತ್ರಗಳು, ಪೋಷಕ ಪಾತ್ರಗಳು ಹೀಗೇ ಅನೇಕ. ಇದೇ ರೀತಿಯಲ್ಲಿ ಹೀಗೆ ಬಂದು ಹಾಗೆ ಹೋಗುವ ಪಾತ್ರಗಳೂ ಕೂಡ ಇಲ್ಲದಿಲ್ಲ. ಕೆಲವೊಮ್ಮೆ ಇವುಗಳ ಕೊರತೆ ಬರಹಗಾರನ ಬರಹದ ಉದ್ದೇಶಕ್ಕೇ ಪೆಟ್ಟು ನೀಡುತ್ತದೆ. ಆದ್ದರಿಂದಲೇ ಬರೆಯುವವರಿಗಾಗಲಿ, ಓದುಗರಿಗಾಗಲಿ ಮುಖ್ಯ ಪಾತ್ರಗಳ ಜೊತೆಗೇ ಇನ್ನಿತರೆ ಹಲವು ಪಾತ್ರಗಳ ಪಾಲುದಾರಿಕೆ ಅವಶ್ಯಕ ಹಾಗೂ ಅನಿವಾರ್ಯ.

ಪಾತ್ರಗಳು ಅತಿಚಿಕ್ಕವೇ ಇರಲಿ, ಸುದೀರ್ಘವೇ ಇರಲಿ ಕಥಾ ರಚನಾಕಾರನ ನಿರ್ದೇಶನದಂತೇ ತಮ್ಮ ಪಾಲಿನ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತವೆ.

ಕೆಲವೊಮ್ಮೆ ದೀರ್ಘವಾದ ಪಾತ್ರವಾದರೂ ಅದು ನೇರವಾಗಿ ಕಾಣಿಸಿಕೊಳ್ಳದೇ ಓದುಗನ ಕಲ್ಪನಾ ರಂಗದ ಮೇಲಷ್ಟೇ ಕಾಣಿಸಿಕೊಳ್ಳುತ್ತದೆ. ಆದರೆ ಅದರ ಅನುಪಸ್ಥಿತಿಯ ಪ್ರಭಾವ ಕಥೆಯನ್ನು ಕಾಡುತ್ತಿರುತ್ತದೆ. ಇಲ್ಲವೇ ಕಥಾ ಬೆಳವಣಿಗೆಯಲ್ಲಿ ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ "ಅನಿಶ್ಚಯ" ಕಾದಂಬರಿಯ ಮಂಜುನಾಥ್ ಪರಿಗಣನೀಯ ಪಾತ್ರ. ಒಬ್ಬ ಸಾಮಾನ್ಯ ಮನುಷ್ಯನ ದೈನಂದಿನ ಸಾಮಾಜಿಕ ಬದುಕನ್ನೇ ಕೇಂದ್ರವಾಗಿಸಿಕೊಂಡ ಈ ಕಾದಂಬರಿಯಲ್ಲಿ ಮಂಜುನಾಥ ಎಂಬ ಹೆಸರು ಪ್ರಾರಂಭದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಆದರೆ ಅವನ ಬದಲಿಗೆ ಸದಾಶಿವನನ್ನೇ ಹುಡುಕಿ ಬಂದ ಅವನ ಪತ್ರ, ಅವನ ಉಪಸ್ಥಿತಿಯನ್ನು ವಹಿಸುತ್ತದೆ. ಕಾದಂಬರಿಯಲ್ಲಿ ಕಾಣಸಿಗುವುದು ಕಡಿಮೆ ಸಂದರ್ಭಗಳಲ್ಲಿ. ಆದರೂ ನಾಯಕನ ಜೀವನದ ತಿರುವುಗಳಲ್ಲಿ ಊರುಗೋಲಾಗಿ ಇಲ್ಲವೇ ಮಾರ್ಗದರ್ಶಕನಾಗಿ ಕಥೆಗೆ ಗಟ್ಟಿತನ ತಂದು ಕೊಡುತ್ತಾನೆ. ಆತ ನಾಯಕ ಸದಾಶಿವನಿಗೆ ಉದ್ದೇಶಿತ ಆಪ್ತನಲ್ಲ, ಆಕಸ್ಮಿಕವಾಗಿ ಆಪ್ತನಾದನಷ್ಟೇ. ಸದಾಶಿವ ಊರನ್ನು ಬಿಟ್ಟು ಬಂದಾಗ ಮದ್ರಾಸಿನಲ್ಲಿ ಚಲನಚಿತ್ರ ನಿರ್ದೇಶಕ ಪ್ರವೀಣಕುಮಾರರ ಭೇಟಿಯಾಗಿ, ಅವರ ಎರಡನೇ ತಮ್ಮ ಮಂಜುನಾಥನೊಟ್ಟಿಗೂ ಸಲಿಗೆ ಬೆಳೆಸಿಕೊಂಡ. ಮಂಜುನಾಥನ ಸಹಾಯದಿಂದ ಬೆಳಗಾವಿಯ ರಾಣಿ ಸೋಪು ಫ್ಯಾಕ್ಟರಿಯಲ್ಲಿ ಕೆಲಸ ಸಿಕ್ಕಿ ಎಂಟು ವರ್ಷಗಳ ಕಾಲ ಅಲ್ಲೇ ಉಳಿದಿದ್ದಾಗ ಆಪ್ತ ಗೆಳೆಯನಾದವನು. ಬೆಳಗಾವಿ ತೊರೆದರೂ ಸ್ನೇಹ ಹಾಗೇ ವೃದ್ಧಿಸಿತ್ತು. ಈತ ಬೆಳಗಾವಿಯಲ್ಲಿ ನಾಲ್ಕು ಅಂತಸ್ತಿನ ದೊಡ್ಡದಾದ ಹೊಟೇಲ್ ನಡೆಸಿಕೊಂಡಿದ್ದನು. ಸದಾಶಿವ ಒತ್ತಡ ರಹಿತ ಬದುಕನ್ನ ಬಯಸಿ ಇತರರಂತೇ ಬದುಕಲು ನಿರ್ಧರಿಸಿದಾಗ ಆತನಿಗೆ ಒಳಿತು ಕೆಡುಕುಗಳ ಮನವರಿಕೆ ಮಾಡಿಕೊಡುವುದು ಈತನೇ. ಕೃಷಿಯನ್ನು ಬಿಟ್ಟು ಹುಬ್ಬಳ್ಳಿಯಲ್ಲಿ ಹೊಟೇಲ್ ತೆರೆಯಲು ನಿರ್ಧರಿಸಿದಾಗ ಮಂಜುನಾಥನೇ ಸಲಹೆ ನೀಡಿದ, ಹೊಟೇಲ್ ಉದ್ಯಮ ಬಿಟ್ಟು ಕೆಲಸ ಹುಡುಕುತ್ತಿದ್ದಾಗ ಈತನೇ ಖಾಂಡೇಕರರನ್ನು ಪರಿಚಯಿಸಿ ಮುಂಬೈನ ನೈನಾ ಬೂಟ್ಸ್ ಕಂಪೆನಿಯಲ್ಲಿ ಕೆಲಸ ಕೊಡಿಸಿದ, ಕಡೆಗೆ ಆ ಕೆಲಸವನ್ನೂ ತೊರೆದು ಮತ್ತೆ ಗದ್ದೆ ಮಾಡಲು ನಿರ್ಧರಿಸಿದಾಗ 'ಗಾಳಿಬೀಡು' ಎಂಬ ಸ್ಥಳದಲ್ಲಿ ಜಮೀನನ್ನೂ ಕಡಿಮೆ ಬೆಲೆಗೆ ತೆಗೆದುಕೊಡುತ್ತಾನೆ. ಹೀಗೇ ಪ್ರತಿಯೊಂದು ಹಂತದಲ್ಲೂ ಮಂಜುನಾಥ ಸ್ವಂತ ತಮ್ಮನಂತೆಯೇ ಬೆನ್ನೆಲುಬಾಗಿ ನಿಲ್ಲುತ್ತಾನೆ. ಬಿಡಿಯಾಗಿ ಬೀಳುತ್ತಿದ್ದ ಕಥಾಹಂದರಕ್ಕೆ ಕೊಂಡಿಯೆಂಬಂತೆ ಈತನ ಪಾತ್ರ ಚಿತ್ರಿಸಲ್ಪಟ್ಟಿದೆ. ಆದ್ರೆ ಸದಾಶಿವ ಮಾತ್ರ ಯಾವುದರಲ್ಲೂ ಪರಿಪೂರ್ಣ ಯಶಸ್ಸು ಕಾಣದಿದ್ದುದು ವಿಪರ್ಯಾಸದ ಸಂಗತಿ. ಸದಾಶಿವನ ಅಂತಿಮ ದಿನಗಳಲ್ಲಿ ಹೆಂಡತಿ ಮಕ್ಕಳೆಲ್ಲರೂ ಆತನನ್ನ ಬಿಟ್ಟು ನಗರ ಸೇರುತ್ತಾರೆ. ಸದಾಶಿವನ ಹೆಂಡತಿ ಪೂರ್ಣಿಮಾಳ ಪತ್ರ ನಿಮಿತ್ತ ಸದಾಶಿವನನ್ನ ನೋಡಲು ಬಂದ ಮಂಜುನಾಥ ಕೇವಲ ಎರಡೇ ವರ್ಷಗಳಲ್ಲಿ ಸೋತು ಸುಣ್ಣವಾಗಿ, ಮುಪ್ಪು ಆವರಿಸಿ, ಬಡಕಲನಾಗಿದ್ದ ಸದಾಶಿವನನ್ನ ಕಂಡು ಮೌನವಹಿಸುತ್ತಾನೆ.

ಅವನ ಸ್ಥಿತಿಯನ್ನು ಕಂಡು ಮರುಗಿ ಅವನಿಗೆ ಹೊಸ ವ್ಯಾಪಾರದ ಆಸೆ ಹುಟ್ಟಿಸಿ ಗಾಳಿಬೀಡನ್ನು ತೊರೆಯಲು ನಿರ್ಧರಿಸುವಂತೆ ಮಾಡುತ್ತಾನೆ. ಸದಾಶಿವ ಅದೇ ಉತ್ಸಾಹದಲ್ಲಿದ್ದಾಗಲೇ ಧರೆಗುರುಳುತ್ತಾನೆ. ಮಂಜುನಾಥ ಇಲ್ಲಿ ಪಾತ್ರವಷ್ಟೇ ಅಲ್ಲ, ನಾಯಕನು ಸಂದಿಗ್ಧ ಸ್ಥಿತಿಗೆ ಸಿಲುಕಿದಾಗ ಹಠಾತ್ತನೆ ಹಾಜರಾಗುತ್ತಾನೆ. ಅವನಿಗೊಂದು ವ್ಯವಸ್ಥೆ ಕಲ್ಪಿಸಿಕೊಟ್ಟು ಮತ್ತೆ ಮಾಯವಾಗುತ್ತಾನೆ. ಬದುಕನ್ನು ಪ್ರಭಾವಿಸುವ ಪಾತ್ರದಾರಿಯೂ, ಆಪತ್ಬಾಂಧವನಂತೆಯೂ ಮಂಜುನಾಥನ ಪಾತ್ರ ಚಿತ್ರಣಗೊಂಡಿದೆ. ವಾಸ್ತವ ಜಗತ್ತಿಗಿರದ ಸ್ಪಷ್ಟತೆ ಕಾದಂಬರಿ ಲೋಕಕ್ಕಿದೆ. ಏಕೆಂದರೆ ಅಲ್ಲೆಲ್ಲವೂ ಪೂರ್ವ ನಿಯೋಜಿತ. ಮಂಜುನಾಥನ ಅಣ್ಣ ಪ್ರವೀಣಕುಮಾರ ಇಲ್ಲದಿದ್ದಿದ್ದರೆ ಮಂಜುನಾಥನೇ ಸಿಗುತ್ತಿರಲಿಲ್ಲ, ಅವನಿಲ್ಲದಿದ್ದಿದ್ದರೆ ನೈನಾ ಬೂಟ್ಸ್ ಕಂಪೆನಿಯ ಮಾಲೀಕ ಖಾಂಡೇಕರ್, ಖಾಂಡೇಕರ್ ಇರದಿದ್ದಿದ್ದರೆ ಅವನ ಹೆಂಡತಿ ಪ್ರಫುಲ್ಲ, ಗಾಳಿಬೀಡಿನ ತೋಟದ ಮನೆಯಲ್ಲಿ ಕೆಲಸಕ್ಕಿದ್ದ ಮನೆಯ ಆಳು ಹನುಮಂತ ಎಲ್ಲವೂ ಕೂಡ ಸಂದರ್ಭೋಚಿತವಾಗಿ ಕಾದಂಬರಿಯೊಳಗೆ ನುಸುಳಿವೆ. ಒಂದಕ್ಕೊಂದು ತಳುಕುಹಾಕಿಕೊಂಡು ತಮಗೆ ವಹಿಸಿದ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿವೆ. ಎಲ್ಲಾ ಸನ್ನಿವೇಶಗಳ ಬಗೆಗೆ ಅರಿವಿರುವ ಕಾದಂಬರಿಗಾರ್ತಿ ಈ ಮುಖೇನ ಪ್ರತೀ ಪಾತ್ರದ ಹೃದಯದ ಭಾವನೆಗಳನ್ನು ಸರಿಯಾಗಿ ದುಡಿಸಿಕೊಂಡಿದ್ದಾರೆ.

ಯಾವುದೇ ಕಾಲಮಾನದ ಬರಹಗಾರನ ಪಾತ್ರಗಳಾದರೂ ಕೂಡ ವಾಸ್ತವ ಜಗತ್ತಿನ ವ್ಯಕ್ತಿಯಂತೆಯೇ ಭಾಸವಾಗುತ್ತವೆ. ನೈಜ ಬದುಕನ್ನೇ ಕಟ್ಟಿಕೊಡಲೆತ್ನಿಸುವ ಬರಹಗಾರ ಕೆಲವೊಮ್ಮೆ ತನ್ನ ಇಷ್ಟದವರ ಹೆಸರನ್ನೇ ತನ್ನ ಕಥೆಯ ಪಾತ್ರಗಳನ್ನಾಗಿಸಿಕೊಳ್ಳುವುದು ಸಹಜ. ನವನಾಗರೀಕತೆ ಹಾಗೂ ಸಾಂಪ್ರದಾಯಿಕತೆಯ ಸಂಘರ್ಷವೇ ಕೇಂದ್ರವಾದ "ಕಾಡು ಕರೆಯಿತು" ಕಾದಂಬರಿಯ ತ್ಯಾಂಪಣ್ಣ ಇಲ್ಲಿ ಬಹುಮುಖ್ಯನಾಗುತ್ತಾನೆ. ಆತ ವಿದ್ಯಾವಂತನೂ ಅಲ್ಲ, ದಡ್ಡನೂ ಅಲ್ಲ. ಊರಿನ ತುದಿಯಲ್ಲಿ ಅಂಗಡಿ ಇಟ್ಟುಕೊಂಡವನು. ಗಿರಾಕಿಗಳನ್ನು ಸೆಳೆಯಲು ಒಂದಿಷ್ಟು ಟಿ ಕಾಫಿ ಮಾಡಿ ಮಾರುವವನು. ಅಲ್ಲದೇ ಊರಿನವರಿಗೆ ಆರೋಗ್ಯ ತಪ್ಪಿದರೂ ಸಣ್ಣಪುಟ್ಟ ಮಾತ್ರೆ ಕೊಡುತ್ತಿದ್ದವನು. ಹಾಗಿಂದ್ಹಾಗೇ ತ್ಯಾಂಪಣ್ಣನ ಅಂಗಡಿ ಕಾಣಿಸಿಕೊಳ್ಳುವುದು ಅತಿ ವಿರಳವಾದರೂ ಅಂಗಡಿಯ ಆಗಮನ ಕಾದಂಬರಿಯ ಬೆಳವಣಿಗೆಗೆ ಪೂರಕವಾಗಿರುವುದು ವಿಶೇಷ. ಕಾದಂಬರಿಯ ಪಾತ್ರಗಳಲ್ಲಿ ಊರ ಯಜಮಾನರ ಮಗ ಕುಮಾರ, ಅಂಗಾರನ ಮಗ ಕರಿಯ, ಅಂಗಡಿಯ ತ್ಯಾಂಪಣ್ಣನಾದಿಯಾಗಿ ಭಾಗಶಃ ಅಕ್ಷರಸ್ಥ ಪಾತ್ರಗಳೇ. ನಗರದಲ್ಲಿ ವೈದ್ಯನಾಗಿದ್ದ ಅಂಗಾರನ ಮಗ ಡಾ.ಕರಿಯನಿಗೆ ತ್ಯಾಂಪಣ್ಣನನ್ನು ಕಂಡರೆ ವಿಶೇಷ ಕಾಳಜಿ, ಇದಕ್ಕೆ ಕಾರಣ ಇಲ್ಲದಿಲ್ಲ. ಕರಿಯನ ಬಗ್ಗೆ ಆ ಊರಿನಲ್ಲಿ ಗೌರವ ತೋರುವವನು ಅವನೇ. ನಗರದಿಂದ ಬಂದಾಗ ಕರಿಯನಿಗೆ ವಿಶೇಷ ಚಹಾ ಸೇವೆಯೂ ಉಂಟು, ಕರಿಯ ಅಲೆಯೂರಿನಿಂದ ಬಂದಾಗ ಅಲ್ಲಿನ ಆಗುಹೋಗುಗಳನ್ನು ಚರ್ಚಿಸುವುದು ಇಲ್ಲಿಯೇ,

ಕರಿಯ ಅಂಗಾರನಿಗಾಗಿ ಬರೆದ ಪತ್ರವನ್ನು ಓದುವವನೂ ತ್ಯಾಂಪಣ್ಣನೇ, ಊರಿನ ಗುಟ್ಟೆಲ್ಲಾ ಬಯಲಾಗುವುದು ಇದೇ ತ್ಯಾಂಪಣ್ಣನ ಅಂಗಡಿಯಲ್ಲೇ, ವೈಯಕ್ತಿಕ ಹಾಗೂ ಊರಿನ ಕುಶಲೋಪರಿ ಎಲ್ಲಾ ಇದೇ ಅಂಗಡಿಯಲ್ಲಿ. ಒಂದು ರೀತಿಯಲ್ಲಿ ತ್ಯಾಂಪಣ್ಣನ ಅಂಗಡಿ ಕಾದಂಬರಿಯ ಸ್ಥಳಗಳಲ್ಲಿ ಕೇಂದ್ರ ಭಾಗ, ಊರಿನ ಒಳಹೊರಗೆಲ್ಲಾ ಊರಿನವರಿಗೆ ತಿಳಿಯುವುದು ಇದೇ ಅಂಗಡಿಯಿಂದಲೇ. ಇನ್ನು ಊರ ಯಜಮಾನ ಶಂಭಯ್ಯನ ಮಗ ಕುಮಾರ ಕೃಷಿ ವಿಜ್ಞಾನದಲ್ಲಿ ಪದವೀಧರ, ಕೃಷಿಯನ್ನು ಆಧುನೀಕರಣಗೊಳಿಸಬೇಕೆನ್ನುವ ಆಶಾವಾದಿ. ಆದರೆ ಅಂಗಾರನ ಕುರಿತು ಸ್ವಲ್ಪವೂ ಕರುಣೆಯುಳ್ಳವನಲ್ಲ. ಅಂಗಾರನ ಗುಡಿಸಲನ್ನು ಕಿತ್ತು ಆ ಜಾಗವನ್ನೂ ಕೃಷಿ ಭೂಮಿಯಾಗಿಸುವ ಸ್ವಾರ್ಥಿಯಾಗಿ ಕಾಣಿಸುತ್ತಾನೆ. ಇನ್ನು ಅರಣ್ಯ ಕಾಯಲು ಬಂದ ವೀರಾಸ್ವಾಮಿ ತನ್ನ ಅಧಿಕಾರ ಚಲಾಯಿಸಲು ಮುಂದಾಗುತ್ತಾನೆ. ತಂಗಮ್ಮಳನ್ನು ದುರುಪಯೋಗಪಡಿಸಿಕೊಳ್ಳಲು ಯತ್ನಿಸಿದಾಗಲೇ ಆಕೆ ನಾಯಕ ಅಂಗಾರನಿಗೆ ಸಿಗುವುದು. ಕಥೆಗೆ ಹೊಸದಾದ ಪ್ರಧಾನ ಪಾತ್ರ ಒಳಬರಲು ಕಾರಣನಾದ ವೀರಸ್ವಾಮಿಯ ಪಾತ್ರ ಕೊನೆಯಲ್ಲಿ ನಾಗರಾಜನಿಂದ ಹಲ್ಲೆಗೊಳಗಾದ ಅಂಗಾರನಿಗೆ ಕರುಣೆ ತೋರುವುದಲ್ಲದೇ ಹಾಗೊಮ್ಮೆ ಹೀಗೊಮ್ಮೆ ಇಣುಕುತ್ತದಷ್ಟೇ. ಹಗಲಿನ ವೇಳೆಯಲ್ಲಿ ಸಭ್ಯಸ್ಥನಂತಿದ್ದು ರಾತ್ರಿ ವೇಳೆ ಅವರಿವರ ಗದ್ದೆ ತೋಟಗಳಲ್ಲಿ ಸಿಕ್ಕಿದ್ದನ್ನು ದೋಚುವ ಸುಂದರ, ಹಂದಿ ಬೇಟೆಯಾಡಲು ಹೇಳುವ ಸೋಂಪ ಪೂಜಾರಿ, ಅಂಗಾರನ ವಿಳಾಸ ಕೊಟ್ಟು ಆಟೋ ರಿಕ್ಷಾ ತೆಗೆದುಕೊಂಡು ಅದರಿಂದ ಮತ್ಯಾರಿಗೋ ಅನಾಹುತ ಮಾಡಿ ಸೈಕಲ್ ಸವಾರನ ಜೀವ ತೆಗೆದು, ಆ ಆಪಾದನೆಯನ್ನು ಅಂಗಾರನ ತಲೆಗೇ ತಂದ ಪದವೀಧರ ನಾಗರಾಜ, ಅರಣ್ಯ ಕಾಯಲು ಬಂದಿದ್ದ ಅಂಗಾರನ ಸಂಬಂಧಿ ತನಿಯ ಅಂಗಾರ ಮತ್ತು ತಂಗಮ್ಮಳ ಅನುಮಾನಕ್ಕೆ ಬಲಿಯಾಗುತ್ತಾನೆ ಹೀಗೇ ಸಾಮಾಜಿಕ ವಿಷಮತೆಯನ್ನು ಗುರುತಿಸಲೆತ್ನಿಸುವ ಇವರ ಬರಹಗಳಲ್ಲಿ ಹತ್ತು ಹಲವು ಪಾತ್ರಗಳು ನಿಯಮಬದ್ಧವಾಗಿ ಸೂಚಿತ ಸಮಯಕ್ಕೆ ಸರಿಯಾಗಿ ಬಂದು ತಮ್ಮ ಕರ್ತವ್ಯ ಪ್ರಜ್ಞೆ ಮೆರೆಯುತ್ತವೆ.

ಸಹಜವೆಂಬಂತೆ ನಡೆಯುವ ನಟನೆಯ ಬದುಕು ಕೆಲವರ ನೆಮ್ಮದಿಯನ್ನೇ ಕಿತ್ತುಕೊಳ್ಳುತ್ತದೆಂಬುದಕ್ಕೆ "ಹಸಿರು ಚಿಗುರು" ಕಾದಂಬರಿ ನಿದರ್ಶನವಾಗಿದೆ. ಅಲ್ಲದೇ ಮೂರು ತಲೆಮಾರುಗಳ ನಡುವಿನ ಸಂಘರ್ಷವನ್ನು ಕಾದಂಬರಿ ನಿರೂಪಿಸುತ್ತದೆ. ಗ್ರಾಮೀಣ ಹಾಗೂ ನಗರ ಸಂಸ್ಕೃತಿಗಳ ನಡುವಿನ ಸಾಮರಸ್ಯ-ವೈಮನಸ್ಯಗಳು ಹಾಸುಹೊಕ್ಕಾಗಿವೆ. ಚಾರುಲತಾ ಮತ್ತು ಶ್ರೀವತ್ಸ ದಂಪತಿಗಳ ಮಗಳು, ಗೋಪಾಲರಾಯರ ಮೊಮ್ಮಗಳೂ ಸಾಕ್ಷಿ. ಗೋಪಾಲರಾಯರು ಮಗನ ಮನೆಯಲ್ಲಿ ಇರಲಾಗದೇ, ಮಗಳ ಮನೆಗೆ ಬಂದಾಗ ಅಜ್ಜ ಮತ್ತು ಮೊಮ್ಮಗಳ ನಡುವೆ ಹೊಸ ಬಾಂಧವ್ಯ ಬೆಳೆದಿರುತ್ತದೆ. ಆದರೆ ಆಕೆ ಸ್ವಲ್ಪ ದೊಡ್ಡವಳಾದ ಮೇಲೆ ಇತ್ತೀಚಿನ ದಿನಮಾನಗಳ ಸಾಮಾಜಿಕ ಜಾಲತಾಣವಾದ ಫೇಸ್ ಬುಕ್ ಆಕೆಗೆ ಗೀಳಾಗುತ್ತದೆ.

ಜೀವನದಲ್ಲಿ ಎಲ್ಲಾ ಬಗೆಯ ಸುಖ ಸಂತೋಷಗಳಿದ್ದರೂ ಆಕೆಗೆ ಕಾಡಿದ ಏಕಾಂಗಿತನದ ಮನಸಿಗೆ ಆತನೊಂದಿಗೆ ಸಂದೇಶಗಳ ಮೂಲಕ ನಡೆಯುವ ಸಂಭಾಷಣೆ ಜೀವ ತುಂಬುತ್ತದೆ. ವಯಸ್ಸಿಗೆ ಮೀರಿದ ಬುದ್ಧಿಶಕ್ತಿ, ಜ್ಞಾನ ಹೊಂದಿದ್ದೂ ಯಂತ್ರಕ್ಕೆ ಅಂಟಿಕೊಂಡ ಸಾಕ್ಷಿಗೆ ಮನುಷ್ಯ ಸಂಬಂಧಗಳ ಬದಲಿಗೆ ಎಲ್ಲೋ ದೂರದಲ್ಲಿ ಕೂತು ಸಂದೇಶ ವಿನಿಮಯಿಸುವ ನರೇಂದ್ರನೆಂಬ ಕಣ್ಣಿಗೆ ಕಾಣದವನೊಬ್ಬನ ಸ್ನೇಹ ನೆಚ್ಚಿಗೆಯಾಗಿರುತ್ತದೆ. ಇದನ್ನು ತಿಳಿದಿದ್ದ ಪೋಷಕರೂ ಸಹ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಗೋಪಾಲರಾಯರ ಬುದ್ದಿ ಮಾತು ಯಾರಿಗೂ ಹಿಡಿಸದೇ, ಕಾಲ ಕಸವಾಗಿ ಕಾಣುತ್ತಾರೆ, ಕಡೆಗೆ ಸಂದೇಶ ಕಳಿಸುತ್ತಿದ್ದವನು ತಾನು(ಸಾಕ್ಷಿ) ಅಂದುಕೊಂಡಂತೆ ಇರಲಿಲ್ಲ, ಮದುವೆಯಾಗಿ ವಯೋಸಹಜ ಹಿರಿಯವನೆಂದು ತಿಳಿದು ಮಾನಸಿಕವಾಗಿ ಬಳಲುತ್ತಾಳೆ. ಅವಳ ಸುಕೋಮಲ ಭಾವನೆಗಳು ಒಂದೇ ಏಟಿಗೆ ಕತ್ತರಿಸಿ ಬಿದ್ದವು, ಘಟನೆ ಚಿಕ್ಕದಾದರೂ ತಾವು ಆಧುನಿಕ ಯುಗದವರೆಂಬ ಮನೋಭಾವ ಮಕ್ಕಳನ್ನ ಎಂಥಾ ಅನಾಹುತಕ್ಕೆಡೆ ಮಾಡಿಕೊಡುತ್ತದೆಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಮಕ್ಕಳ ಒಂಟಿತನಕ್ಕೆಡೆ ಮಾಡಿಕೊಡದೇ, ಕೆಲವೊಮ್ಮೆ ಭವಿಷ್ಯದ ಹಿತದೃಷ್ಟಿಯಿಂದ ತಾಯ್ತಂದೆಯರು ಮಕ್ಕಳಿಗಾಗಿ ಮಕ್ಕಳಾಗಬೇಕೆಂಬುದನ್ನು ಬಹಳ ಮಾರ್ಮಿಕವಾಗಿ ತಿಳಿಸಿದ್ದಾರೆ. ಇದೇ ಕಾದಂಬರಿಯ ಸುಧೀರ್ ಚೌಧರಿ ನಯವಂಚಕನೆಂದೇ ಹೇಳಬೇಕು. ಯಾರ ಮಾರ್ಗದರ್ಶನವೂ ಇಲ್ಲದೇ ಲಾಭ ಗಳಿಸಿ ತೋರಿಸಬೇಕೆಂದು ಭಾವಿಸಿದ್ದ ಅತೀಶ ರಜತಗಿರಿಯಿಂದ ಬಂದ ಹಣವನ್ನು ನಂಬಿಕೆ–ವಿಶ್ವಾಸದ ಮೇಲೆ ಸುಧೀರ್ ಚೌಧರಿಗೆ ಕೊಟ್ಟ, ಆತ ವ್ಯವಹಾರಕ್ಕೆ ಬೇಕಾದ ಜಾಗವನ್ನು ನೋಡಿ ಆಗಿದೆ, ಯಂತ್ರೋಪಕರಣಗಳನ್ನು ತರುತ್ತೇನೆಂದು ಹೋದವನು ಬರಲೇ ಇಲ್ಲ. ರಜತಗಿರಿಯ ಹಣದಲ್ಲಿ ಬ್ಯಾಂಕ್ ಅರ್ಧ ನುಂಗಿತ್ತು, ಗುರುತಿಲ್ಲದವನಿಗೆ ಹಣ ಕೊಟ್ಟಿದ್ದರಿಂದ ಸುಧೀರ್ ಚೌಧರಿ ಅರ್ಧ ನುಂಗಿದ, ಅತೀಶ ಮೋಸಗೊಂಡ. ಕಾದಂಬರಿಯಲ್ಲಿ ಸುಧೀರ್ ಚೌಧರಿ ಮುಖ್ಯನಲ್ಲ ಆದರೂ ಅವನ ಪಾತ್ರ ಕಾದಂಬರಿಯ ಬೆಳವಣಿಗೆಯಲ್ಲಿ ಬಹುಮುಖ್ಯವಾಗಿದೆ. ಈ ಕಾದಂಬರಿ ಸಂಪೂರ್ಣವಾಗಿ ಆಧುನಿಕತೆಗೆ ತಕ್ಕಂತೆ ರೂಪಣೆಗೊಂಡಿದೆ. ಬಾಲ್ಯ, ಪ್ರೌಢ, ಮಧ್ಯವಯಸ್ಕ, ಹಿರಿಯ ಪಾತ್ರಗಳ ಮುಖೇನ ಇಡೀ ನವನಾಗರೀಕತೆಯ ಜಗತ್ತು ಹೇಗೆ ರೂಪಿತವಾಗಿದೆ ಎಂಬುದನ್ನು ಬಿಂಬಿಸಲೋಸುಗ ಕಾದಂಬರಿ ರಚಿಸಲ್ಪಟ್ಟಿದ್ದು, ಉದ್ದೇಶಿತ ಗುರಿಯನ್ನು ತಲುಪುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ. ಎಲ್ಲರೂ ಕಳೆದದ್ದನ್ನ ಸಂಪಾದಿಸುವುದು, ಸಂಪಾದಿಸಿದ್ದನ್ನ ಕಳೆಯುವುದು ಅದೊಂದು ಚಕ್ರದಂತೆ, ಎಲ್ಲವೂ ಬದಲಾಗಲೇಬೇಕೆಂಬ ಪ್ರಬುದ್ಧತೆ ಕಾದಂಬರಿಯ ಮುಖ್ಯ ಪಾತ್ರಗಳಲ್ಲಿ ಮೂಡುತ್ತದೆ. ಇದೊಂದೇ ಅಲ್ಲ ಕಾದಂಬರಿಯ ಪ್ರತಿಯೊಂದು ಪಾತ್ರಗಳೂ ಸನ್ನಿವೇಶಗಳೂ ಸಮಾಜಕ್ಕೆ ಉತ್ತಮ ಸಂದೇಶ ನೀಡಲು ದುಡಿದಿವೆ. ರಜತಗಿರಿಯ ಜಮೀನಿನಲ್ಲಿ ಕೃಷಿ ಮಾಡುತ್ತಾ ಅದರಲ್ಲಿ

ಬಂದದ್ದನ್ನ ಅತೀಶನ ಕುಟುಂಬಕ್ಕೆ ನೀಡುತ್ತಾ ಗೋಪಾಲರಾಯರ ಸಂಪತ್ತನ್ನು ನೋಡಿಕೊಳ್ಳುವ ಸೋಮಸುಂದರ, ಗೋಪಾಲರಾಯರು ಊರುಬಿಟ್ಟು ಹೋದಾಗ ಪರಿಚಿತರಾದ ವಿಜಯವಾಡದ ಮಯೂರಿ ಹೋಟೇಲ್ ಮತ್ತು ವಸತಿಗೃಹದ ಮಾಲೀಕರಾದ ವಾಸುದೇವನ್, ಮುಂದೆ ಗೋಪಾಲರಾಯರು ಅದೇ ಹೊಟೇಲ್ ಗೆ ಮೇಲ್ವಿಚಾರಕರಾದಾಗ ಪರಿಚಯರಾದ ವಾಸುದೇವನ್ ರವರ ದೂರದ ಸಂಬಂಧಿ ಎಂಬತ್ತು ವರ್ಷ ವಯಸ್ಸಿನ ಸತ್ಯಶಂಕರಿ, ಶ್ರೀವತ್ಸನ ಅಣ್ಣ ನಾರಾಯಣ ರಾವ್, ಪಟ್ಟಣಕ್ಕೆ ಬಂದು ಓದಲು ಪ್ರಾರಂಭಿಸುವ ಆತನ ಮಗ ಆದಿತ್ಯ ಎಲ್ಲರೂ ಕೂಡ ಸಂದರ್ಭೋಚಿತವಾಗಿ ಕಾದಂಬರಿಯೊಳಗೆ ನುಸುಳಿ ಕೌಟುಂಬಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟಿಕೊಡಲು ತಮಗೆ ವಹಿಸಿದ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆನ್ನಬಹುದು.

ಯಾವುದೇ ಬಗೆಯ ಬರಹಗಾರನಾದರೂ ಕೂಡ ತಾನು ಆರಿಸಿಕೊಂಡ ಸಾಮಾಜಿಕ ವಸ್ತು–ವಿಷಯಗಳಿಗೆ ತಕ್ಕಂತೆ ಸನ್ನಿವೇಶ ಸಂದರ್ಭಗಳನ್ನು ನಿರ್ಮಿಸಿ, ಪಾತ್ರಗಳನ್ನು ಸೃಷ್ಟಿಸಿ ಆ ಮುಖೇನ ಉದ್ದೇಶಿತ ಗುರಿಯೆಡೆಗೆ ಸಾಗುತ್ತಾನೆ. ಇಂದಿಗೂ ಕೂಡ ಸಾಮಾಜಿಕ ಜೀವನದ ಎಷ್ಟೋ ವಿಷಯಗಳು ಕಾದಂಬರಿಕಾರರ ಅನುಭವದ ಮೂಸೆಯಲ್ಲಿ ಹತ್ತಾರು ದೃಷ್ಟಿಕೋನಗಳಿಂದ ವ್ಯಕ್ತಗೊಳ್ಳುತ್ತಲೇ ಇವೆ. ಒಬ್ಬ ನಿಜವಾದ ಕಾದಂಬರಿಕಾರ ತನ್ನದೇ ಪರಿಸರದ ವ್ಯಕ್ತಿಗಳ ಮುಖವಾಡದ ಬದುಕನ್ನು ಅರಿಯಲೆತ್ನಿಸುತ್ತಾನೆ. ಕಾರಣಗಳನ್ನು ಹುಡುಕುತ್ತಾನೆ. ಅರ್ಥ ಮಾಡಿಕೊಳ್ಳಲಾಗದ ವ್ಯಕ್ತಿಗಳನ್ನು ಅರ್ಥ ಮಾಡಿಕೊಳ್ಳಲು ತನ್ನ ಕಾದಂಬರಿಯನ್ನು ಪೂರಕವಾಗಿ ಬಳಸಿಕೊಳ್ಳುತ್ತಾನೆ. ಏಕೆಂದರೆ ನಮ್ಮ ವಾಸ್ತವ ಬದುಕಿಗಿಂತ ಸ್ಪಷ್ಟತೆ, ನಿಖರತೆ ಒಂದು ಕಾದಂಬರಿಗಿರುತ್ತದೆ. ‘‘ಕಾದಂಬರಿಕಾರ ತಾನೇ ಸೃಷ್ಟಿಸಿದ ವ್ಯಕ್ತಿಗಳ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ, ಆದರೆ ನಿಜವಾದ ವ್ಯಕ್ತಿಗಳ ವಿಷಯದಲ್ಲಿ ಈ ಅಧಿಕಾರವಾಣಿ ಅವನದಲ್ಲ.’’ (ಎಲ್.ಎಸ್. ಶೇಷಗಿರಿರಾವ್; ಕಾದಂಬರಿ ಸಾಮಾನ್ಯ ಮನುಷ್ಯ; ಪುಟ– 65) ಏಕೆಂದರೆ ಕಾದಂಬರಿ ಅವನಿಗೆ ಸ್ವಂತ, ಅದು ಅವನ ಹಿಡಿತದಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಈ ಜಗತ್ತು ವಾಸ್ತವ, ಆದ್ದರಿಂದ ಇಲ್ಲಿ ಎಲ್ಲರ ಅಭಿಪ್ರಾಯಗಳೂ ಭಿನ್ನ ವಿಭಿನ್ನ. ಎ. ಪಿ. ಮಾಲತಿಯವರು ಸ್ತ್ರೀ ಬರಹಗಾರರಾದರೂ ಪುರುಷ ವಿರೋಧಿಯಲ್ಲ, ಹಾಗಂತ ಸ್ತ್ರೀ ಪರವೂ ಅಲ್ಲ. ಈ ನಿಟ್ಟಿನ ಸನ್ನಿವೇಶಗಳು ಕಾದಂಬರಿಗಳಲ್ಲಿ ಎಲ್ಲೂ ವ್ಯಕ್ತವಾಗಿಲ್ಲ, ಬದುಕಿನ ಯಾವುದೇ ಸಂದರ್ಭಕ್ಕೂ ಸ್ತ್ರೀ ಪುರುಷರೀರ್ವರೂ ಸಮಾನ ಹೊಣೆಗಾರರೆಂಬ ಪ್ರತಿಪಾದನೆ ಇವರ ಬರಹಗಳಲ್ಲಿ ವ್ಯಕ್ತಗೊಂಡಿದೆ.

**ಆಕರ ಗ್ರಂಥಗಳು:**

1. ಮಾಲತಿ ಎ.ಪಿ., (1978), ಅನಿಶ್ಚಯ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
2. ಮಾಲತಿ ಎ.ಪಿ., (1985), ತಿರುಗಿದ ಚಕ್ರ, ಗೀತಾ ಬುಕ್ ಹೌಸ್, ಮೈಸೂರು.
3. ಮಾಲತಿ ಎ.ಪಿ., (1987), ಕಾಡು ಕರೆಯಿತು, ಗೀತಾ ಬುಕ್ ಹೌಸ್, ಮೈಸೂರು.
4. ಮಾಲತಿ ಎ.ಪಿ., (2008), ಹಸಿರು ಚಿಗುರು, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು.

**ಪರಾಮರ್ಶನ ಗ್ರಂಥಗಳು:**

1. ಶೇಷಗಿರಿರಾವ್ ಎಲ್.ಎಸ್., (1990), ಕಾದಂಬರಿ– ಸಾಮಾನ್ಯ ಮನುಷ್ಯ, ಶಾರದಾ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.